## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (405) 267 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 23.09.2020 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆಯಲ್ಲಿನ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಕಾಲೇಜಿನ ಬಾಲಕರ ವಿದ್ಯಾರ್ಥಿನಿಲಯಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಯಾವಾಗ ಕಾರ್ಯಾದೇಶ ನೀಡಲಾಯಿತು; ಇದಕ್ಕೆ ನೀಡಿದ ಹಣವೆಷ್ಟು; | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಿಗೆ ರೂ.154.60 ಲಕ್ಷಗಳ ಮೊತ್ತದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ದಿ:23.04.2020 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. |
| ಆ) | ಈ ಸಂಬಂಧ ಕಿಯೋನಿಕ್ಸ್‌ಗೆ ಯಾವ ದಿನಾಂಕದಂದು ಚೆಕ್ ಸಮೇತ ಹಣ ಪಾವತಿ ಮಾಡಲಾಗಿದೆ; (ವಿವರವಾರು ಮಾಹಿತಿ ನೀಡುವುದು) | ಈ ಸಂಬಂಧ ದಿನಾಂಕ:24.07.2020 ರಂದು ಕಿಯೋನಿಕ್ಸ್ ಸಂಸ್ಥೆಗೆ ರೂ.1,54,57,810/- ಗಳ ಮೊತ್ತದ ಚೆಕ್‌ನ್ನು ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.<br>ಚೆಕ್ ಸಂಖ್ಯೆ : 094159 ದಿನಾಂಕ:27.04.2020 ಮೊತ್ತ 52,69,030.00<br>ಚೆಕ್ ಸಂಖ್ಯೆ : 094160 ದಿನಾಂಕ:27.04.2020 ಮೊತ್ತ 50,94,390.00<br>ಚೆಕ್ ಸಂಖ್ಯೆ : 094161 ದಿನಾಂಕ:27.04.2020 ಮೊತ್ತ 50,94,390.00. |
| ಇ) | ದಿನಾಂಕ:23.04.2020 ರಂದು ಕಾರ್ಯಾದೇಶ ನೀಡಿ ದಿನಾಂಕ:27.04.2020 ರಂದು ಚೆಕ್ ಮೂಲಕ ಹಣ ಪಾವತಿಸಿರುವುದಕ್ಕೆ ಕಾರಣಗಳೇನು; ಕಾಮಗಾರಿ ನಿರ್ವಹಣೆ ಮಾಡದೆ ಹಣ ಬಿಡುಗಡೆ ಮಾಡಿರುವುದು ಸರಿಯೇ | ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಟೆಂಡರ್ ಕರೆಯಬೇಕಾಗಿರುವುದರಿಂದ ಮುಂಗಡವಾಗಿ ಅನುದಾನ ಬಿಡುಗಡೆ ಮಾಡುವಂತೆ ಕಿಯೋನಿಕ್ಸ್ ಸಂಸ್ಥೆಯವರು ಕೋರಿರುವ ಹಿನ್ನಲೆಯಲ್ಲಿ, ಹಾಗೂ ಕಿಯೋನಿಕ್ಸ್ ಸಂಸ್ಥೆಯು ಸರ್ಕಾರದ ಅಂಗ ಸಂಸ್ಥೆಯಾಗಿರುವುದರಿಂದ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಮೂಲಭೂತ ಸೌಕರ್ಯಗಳನ್ನು ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿದ ನಂತರ ಸದರಿ ಸಾಮಾಗ್ರಿಗಳು ಗುಣಮಟ್ಟದಿಂದ ಇರುವ ಬಗ್ಗೆ ಮೂರನೇ ವ್ಯಕ್ತಿ ತಪಾಸಣೆ ಕೈಗೊಂಡು ವರದಿಯನ್ನಾದರಿಸಿ ಟೆಂಡರ್‌ನಲ್ಲಿ ಆಯ್ಕೆಯಾದ ಸಂಸ್ಥೆಗೆ ಅನುದಾನವನ್ನು ಮರು ಬಿಡುಗಡೆ ಮಾಡುವಂತೆ ಕಿಯೋನಿಕ್ಸ್ ಸಂಸ್ಥೆಗೆ ತಿಳಿಸಲಾಗಿರುತ್ತದೆ. |
| ಈ) | ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | ಮೂಲಭೂತ ಸೌಕರ್ಯಗಳನ್ನು ಶೀಘ್ರದಲ್ಲೇ ಒದಗಿಸಲು ಸರ್ಕಾರದಿಂದ ನಿರ್ದೇಶನ ನೀಡಲಾಗುವುದು. |

ಸಕಇ 268 ಎಸ್‌ಟಿಪಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ
ಸಮಾಜ ಕಲ್ಯಾಣ ಸಚಿವರು